

3

ಮನೆ ತಲುಪುವವರೆಗೆ ಅಪ್ಪ, ಮಗ ಯಾವ ಮಾತನ್ನೂ ಆಡಲಿಲ್ಲ. ಅಪ್ಪನಿಗೂ ಪ್ರಾಪರ್ಟಿ ಇಷ್ಟವಾಗಿಲ್ಲ; ಅವರು ಮನೆಯನ್ನೇ ಸರಿಯಾಗಿ ನೋಡಲಿಲ್ಲ, ಒಳ್ಳೇದಾಯ್ತು ಅಂದುಕೊಂಡ ಮುಕುಂದ ಅಪ್ಪನನ್ನು ಇಳಿಸಿ, ಗರಾಜಿನ ಬಾಗಿಲು ತೆರೆಯಲು ಹೋದ. ಇವರಿಬ್ಬರು ಬರುವುದನ್ನೇ ಕಾಯುತ್ತಿದ್ದ ಸುನಂದಮ್ಮ ಕಾತುರದಿಂದ ವಿಚಾರಿಸಿದರು. ಒಟ್ಟಿಗೆ ಕಾಫಿ ಕುಡಿಯುವಾಗ ಮುಕುಂದ 'ಬೆಲೆ ಜಾಸ್ತಿ ಕಣಮ್ಮ' ಅಂದ. ಕೃಷ್ಣೇಗೌಡರು ಏನೂ ಮಾತಾಡಲಿಲ್ಲ, ಕಾಫಿ ಕುಡಿದು ಬಟ್ಟೆ ಬದಲಾಯಿಸಲು ಎದ್ದು ಹೋದರು. ಮುಕುಂದ ಹೂವಿನ ಮರ, ಸೈಟು, ಮನೆಯ ಒಳಭಾಗ, ಅಡುಗೆಮನೆ ಎಲ್ಲ ಸ್ಕೆಚ್ ಹಾಕಿ ವಿವರಿಸಿದ. 'ನನಗೇನೋ ಏರಿಯಾ ಅಷ್ಟು ಇಷ್ಟವಾಗಲಿಲ್ಲಾಮ್ಮಾ, ಬೆಲೇನೂ ತುಂಬಾ ಜಾಸ್ತಿ' ಅಂದು ತನ್ನ ರೂಮಿನ ಕಡೆಗೆ ಹೋದ.

ಕೇವಲ ವಾರದ ಹಿಂದೆ ವೈನ್ ಪಾರ್ಟಿಯಲ್ಲಿ ಪ್ರಾಪರ್ಟಿಗೀಪರ್ಟಿಗಳ ಯಾವ ತಲೆನೋವೂ ಬೇಡ ಅಂದಿದ್ದ ಕೃಷ್ಣೇಗೌಡರ ಮನಸ್ಸು ಇದ್ದಕ್ಕಿದ್ದಂತೆ ಉಲ್ಟಾ ಹೊಡೆದದ್ದು ಯಾಕೆ? ಗಂಡ, ಮಗಳಿಗೆ ಮುಖವನ್ನ ತೋರಿಸದೆ ದಫನ್ ಮಾಡಿದ ಮಾತು ಕೇಳಿದ ತಕ್ಷಣದಿಂದಲೇ ಗೌಡರು ತೀವ್ರ ಅಂತರ್ಮುಖಿಯಾಗಿ ಹೋದರು. ಗಳಿಗೆ ಗಳಿಗೆಗೆ ಅವರ ಮನೋಚಕ್ಷುಗಳ ಮುಂದೆ ಗೌರಿಯ ಮುಖ ಮೂಡಿ ಬರುತ್ತಲೇ ಇತ್ತು. ಯಾರ ಬಳಿಯೂ ಯಾವ ಮಾತನ್ನೂ ಆಡಲಿಲ್ಲ. ಊಟದ ಶಾಸ್ತ್ರವನ್ನಷ್ಟೆ ಮುಗಿಸಿ ಕೂಡಲೇ ಮಲಗಲು ಹೋದರಾದರೂ ಬಹಳ ಹೊತ್ತಿನವರೆಗೆ ಅವರಿಗೆ ನಿದ್ರೆ ಬರಲಿಲ್ಲ. ಅವರು ಗಳಿಗೆಗೊಮ್ಮೆ ಮಗ್ಗುಲು ಬದಲಿಸುವುದನ್ನು ಕಂಡು ಹೆಂಡತಿ, 'ಏನೋ ಒಂದಾಗುತ್ತೆ, ನೆಮ್ಮದಿಯಾಗಿ ಮಲ್ಕೊಳಿ' ಅಂದು ತಾವು ಮಲಗಿದರು. ಬಹಳ ಹೊತ್ತಿನವರೆಗೆ ಎಚ್ಚರದಲ್ಲಿದ್ದ ಗೌಡರು ಎಷ್ಟಾದರೂ ಬೆಲೆ ಆಗಲಿ ಕೊಳ್ಳಲೇಬೇಕು ಎಂಬ ನಿರ್ಧಾರ ಮಾಡಿಯೇ ನಿದ್ರೆಗೆ ಜಾರಿದರು.

ಮರುದಿನ ಬೆಳಗ್ಗೆ ಎಂದಿಗಿಂತ ಬೇಗನೆ ಕಾಫಿಗೂ